**C.C.No.1595/2013, CW-1 PW-1**

ದಿನಾಂಕಃ **27-02-2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ಮುಂದುವರೆದ ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನೀಗ ದೂರನ್ನು ನೋಡುತಿದ್ದು ಅದನ್ನು ನಿಪಿ-1, ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1-ಎ ಎಂದು ಗುರುತಿಸಲಾಯಿತು. ದಿಃ 05-04-2013 ರಂದು ತಯಾರಿಸಿದ ಡಿ.ವಿ.ಡಿ ಯನ್ನು ನಾನೀಗ ನೋಡುತಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ಬಿ ಟಿ ರವರಿಂದಃ

ವೀಡಿಯೋ ವೀವಿಂಗ್ ಟೀಮಿನ ಚಾಸಾ-4 ರವರು ಚುನಾವಣಾ ಅಧಿಕಾರಿಗಳಾದ ಎಂ.ಆರ್.ರವಿ ರವರಿಗೆ ಮು.ಮಾ.1 ಮತ್ತು ವರದಿಯನ್ನು ನೀಡಿರುತ್ತಾರೆ. ಸದರಿ ಚುನಾವಣಾ ಅಧಿಕಾರಿಯಾದ ಎಂ.ಆರ್. ರವಿಯವರು ನನಗೆ ದಿಃ 11-04-2013 ರಂದು ಮು.ಮಾ.1 ಮತ್ತು ವರದಿಯನ್ನು ನೀಡಿ ಆರೋಪಿಯ ವಿರುದ್ಧ ಕ್ರಮ ತೆಗೆದುಕೊಳ್ಳಲು ದೂರು ಕೊಡಲು ತಿಳಿಸಿರುತ್ತಾರೆ. ನಾನು ಮು.ಮಾ.1 ನ್ನು ವೀಕ್ಷಣೆ ಮಾಡಿರುತ್ತೇನೆ. ಮು.ಮಾ.1 ರಲ್ಲಿ ಮೆರವಣಿಗೆ ಹೋಗುವುದು ಕಂಡು ಬಂದಿರುತ್ತದೆ. ಮೆರವಣಿಗೆಯನ್ನು ಯಾರು ಮಾಡಿದ್ದರು ಎಂಬುದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆರೋಪಿಗೆ ಕಾಡಬೇಕು ಎನ್ನುವ ಉದ್ದೇಶದಿಂದ ನಿಪಿ-1 ರಂತೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚುನಾವಣಾ ಅಧಿಕಾರಿಯಾದ ಎಂ.ಆರ್. ರವಿಯವರು ನೀಡಿದ ಮೂಲ ವರದಿಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೆ. ಕೇ. ಸರಿ ಇದೆ,**

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.